# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ**

**ಉತ್ತರಹಳ್ಳಿ ಉಪವಿಭಾಗ**

**ಸುಬ್ರಹ್ಮಣ್ಯಪುರ ಪೋಲೀಸ್ ಠಾಣೆ ಹತ್ತಿರ, ಸುಬ್ರಹ್ಮಣ್ಯಪುರ, ಉತ್ತರಹಳ್ಳಿ ಮುಖ್ಯರಸ್ತೆ, ಬೆಂಗಳೂರು-560061**

ಸಂಖ್ಯೆ:ಸ.ಕಾ.ಅ/ಉ.ಉ.ವಿ/ಪಿಆರ್/ /2022-23 ದಿನಾಂಕ:

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಿಷಯ: ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶ ಸಂಖ್ಯೆ.ಬಿ(12)ಪಿಆರ್/35/2020-21 ದಿ:21.09.2020 ರವರ ಆದೇಶದಂತೆ ದಿ:08.04.2022 ರಂದು ವಾರ್ಡ್ ನಂ.197-ವಸಂತಪುರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

---

**ಸಭೆಗೆ ಹಾಜರಾಗಿದ್ದವರ ವಿವರಗಳು:-**

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಉಪಸ್ಥಿತರು |
|---|---|---|---|
| 1 | ಶ್ರೀ ಮಾದೇಶ್ | ನೋಡಲ್ ಅಧಿಕಾರಿ | ಹಾಜರಿರುತ್ತಾರೆ. |
| 2 | ಶ್ರೀ ತಿಮ್ಮಯ್ಯ.ವಿ | ಸದಸ್ಯ ಕಾರ್ಯದರ್ಶಿ/ ಸಹಾಯಕ ಅಭಿಯಂತರರು | ಹಾಜರಿರುತ್ತಾರೆ. |
| 3 | ಶ್ರೀ ಗಂಗಣ್ಣಯ್ಯ | ಕಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿರುತ್ತಾರೆ. |
| 3 | ಶ್ರೀಮತಿ ಪ್ರೀತಿ.ಜೆ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್ ಇಲಾಖೆ | ಗೈರು ಹಾಜರು |
| 5 | ಶ್ರೀ ನವೀನ್‌ಕುಮಾರ್.ಕೆ | ಕೆಲಸ ಪರಿವೀಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ | ಗೈರು ಹಾಜರು |
| 6 | ಶ್ರೀ ಸಂಕೇತ್ | ಎಲೆಕ್ಟ್ರೀಷಿಯನ್, ಬೀದಿ ದೀಪ ಇಲಾಖೆ | ಗೈರು ಹಾಜರು |
| 7 | ಶ್ರೀ ಚಿನ್ನಯ್ಯ | ಹಸಿರುದಳ ಒಣತ್ಯಾಜ್ಯ ಸಂಗ್ರಹಣೆ, | ಗೈರು ಹಾಜರು |
| 8 | ಶ್ರೀ ಸತೀಶ್ | ಮೇಲ್ವಿಚಾರಕರು, ಘನತ್ಯಾಜ್ಯ ಇಲಾಖೆ, | ಗೈರು ಹಾಜರು |

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಸಂತಪುರ ವಾರ್ಡ್ ಸಂಖ್ಯೆ.197 ರಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಮಾದೇಶ್ ರವರು ದಿ:08.04.2022 ರಂದು ಶುಕ್ರವಾರ ಬೆಳಿಗ್ಗೆ 11.00ಕ್ಕೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಸಮಿತಿಯ ಸದಸ್ಯರಿಗೆ ಶ್ರೀ ಕಾರ್ಯದರ್ಶಿ/ಸಹಾಯಕ ಅಭಿಯಂತರರು ಆದ ಶ್ರೀ ತಿಮ್ಮಯ್ಯ.ವಿ ರವರು ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

**1.ಒಳಚರಂಡಿ:-**

ವಾರ್ಡ್ ನಂ.197, ವಸಂತಪುರ ವ್ಯಾಪ್ತಿಯಲ್ಲಿನ ಒಳಚರಂಡಿ ಮತ್ತು ನೀರು ಸರಬರಾಜು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಇಲಾಖೆ ರವರು ಗೈರು ಹಾಜರಾಗಿದ್ದು, ಸಭೆಯಲ್ಲಿ ಒಳಚರಂಡಿ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚಿಸಲು ಸಾಧ್ಯವಾಗಿರುವುದಿಲ್ಲ.



Scanned with CamScanner

**2.ಬೆಸ್ಕಾಂ:-**

ವಾರ್ಡ್ ವ್ಯಾಪ್ತಿಯಲ್ಲಿನ ವಿದ್ಯುತ್ (ಬೆಸ್ಕಾಂ) ಇಲಾಖೆ ರವರು ಗೈರು ಹಾಜರಾಗಿದ್ದು, ಸಭೆಯಲ್ಲಿ ವಿದ್ಯುತ್ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚಿಸಲು ಸಾಧ್ಯವಾಗಿರುವುದಿಲ್ಲ.

**3.ಘನತ್ಯಾಜ್ಯ ನಿರ್ವಹಣೆ:-**

ವಾರ್ಡ್ ವ್ಯಾಪ್ತಿಯ ಚಿಕ್ಕಲಸಂದ್ರದಲ್ಲಿ ಹಸಿ-ಕಸ ಹಾಗೂ ಒಣ ಕಸದ ನಿರ್ವಹಣೆಯ ಬಗ್ಗೆ ಹಾಗೂ ವಿಠಲನಗರದ ಕಸದ ರಾಶಿಯಿಂದ ದುರ್ವಾಸನೆ ಬರುವುದನ್ನು ತಡೆಗಟ್ಟುವ ಬಗ್ಗೆ ಚರ್ಚಿಸಲಾಯಿತು.

**4. ಇಂಜಿನಿಯರಿಂಗ್ ಇಲಾಖೆ:-**

ವಾರ್ಡ್ ವ್ಯಾಪ್ತಿಯ ವಿಠಲನಗರದಲ್ಲಿರುವ ಗ್ಯಾರೇಜನ್ನು ತೆರವುಗೊಳಿಸುವುದರ ಬಗ್ಗೆ ಹಾಗೂ ಹಳೆ ವಾಹನಗಳನ್ನು ತೆರವುಗೊಳಿಸುವ ಬಗ್ಗೆ ಹಾಗೂ ನಾರಾಯಣ ನಗರದ ಚರಂಡಿಗಳಲ್ಲಿ ತುಂಬಿಕೊಂಡಿರುವ ಹೂಳನ್ನು ತೆಗೆಯಲು ಕ್ರಮಕೈಗೊಳ್ಳಲು ಸಭೆಯಲ್ಲಿ ಚರ್ಚಿಸಲಾಯಿತು

**5.ನೋಡಲ್ ಅಧಿಕಾರಿ:-**

ವಾರ್ಡ್ ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷರಾದ ಶ್ರೀ ಮಾದೇಶ್ ರವರು ಈ ದಿನ ಸಭೆಗೆ ಗೈರು ಹಾಜರಾದ ಅಧಿಕಾರಿಗಳ ವಿರುದ್ಧ ಮೇಲಾಧಿಕಾರಿಗಳ ಗಮನಕ್ಕೆ ತಂದು ಕ್ರಮಕೈಗೊಳ್ಳುವಂತೆ ತಿಳಿಸಲಾಗುವುದು ಮತ್ತು ಆದ್ಯತೆ ಮೇರೆಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಾಗುವುದೆಂದು ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.197-ವಸಂತಪುರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ.197-ವಸಂತಪುರ

Scanned with CamScanner